**ಸಾಕ್ಷಿಯನ್ನು ದಿಃ 16.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ 1 ನೇ ಎದುರುದಾರರ ಪರ ಶ್ರೀ ಎಂ.ಬಿ.ಜಿ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಸಾಕ್ಷಿ ಆಧಾರ್ ಕಾರ್ಡ್ ನ ನೋಟರಿಕೃತ ದಾಖಲೆ ಹಾಜರುಪಡಿಸಿದ್ದು, ಅದನ್ನು ನಿಆರ್. 3 ಎಂದು,
ಮೃತರ ಆಧಾರ್ ಕಾರ್ಡ್ ನ ನೋಟರಿಕೃತ ದಾಖಲೆ ಹಾಜರುಪಡಿಸಿದ್ದು, ಅದನ್ನು ನಿಆರ್. 4 ಎಂದು,
ಬಿ.ರಿಜಿಸ್ಟರ್ ಎಕ್ಸಟ್ರಾಕ್ಟ್ ಅನ್ನು ಹಾಜರು ಪಡಿಸಿದ್ದು ಅದನ್ನು ನಿಆರ್. 5 ಎಂದು,
ಪ್ರಸನ್ನ ರವರ ಎಲ್.ಎಲ್. ಆರ್ ಅನ್ನು ಹಾಜರು ಪಡಿಸಿದ್ದು ಅದನ್ನು ನಿಆರ್. 6 ಎಂದು ಗುರುತಿಸಲಾಯಿತು.

(ನಿಆರ್. 3 ಮತ್ತು ನಿಆರ್. 4 ರ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ಹಿಂದಿರುಗಿಸಲಾಯಿತು)

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಕೆ.ಎಸ್.ಆರ್ ವಕೀಲರಿಂದಃ**

ಮೋಟಾರ್ ಬೈಕ್ ಕೆಎ-12-ವಿ-8064 ಗೆ ನಾನು ಮಾಲೀಕ. ಅದರ ಪಾಲಿಸಿ ನನ್ನ ಹೆಸರಿನಲ್ಲಿದೆ ಇದೆ ಎಂದರೆ ಸರಿ. ಅಪಘಾತದ ದಿನ ನನ್ನ ಮೋಟಾರ್ ಬೈಕ್ ಅನ್ನು ಚಲಾಯಿಸುತ್ತಿದ್ದ ಮೃತ ಪ್ರಸನ್ನ ನನ್ನ ಅತ್ತೆ ಮಗ. ನಾವು ಇಬ್ಬರು ಆದರ್ಶ ದ್ರಾವಿಡ ಕಾಲೇಜು, ಕುಶಾಲನಗರದಲ್ಲಿ ವಾಸಿಸುತ್ತೇವೆ. ಆ ದಿನ ನನ್ನ ಬೈಕ್ ಅನ್ನು ಮೃತ ಪ್ರಸನ್ನನಿಗೆ ಕೊಟ್ಟಿದ್ದೆ. ಪ್ರಸನ್ನ ಸಂಜೆ 05.00 ಗಂಟೆಗೆ ಮೈಸೂರಿಗೆ ಹೋಗಿ ಬರುವುದಾಗಿ ಬೈಕ್ ಅನ್ನು ಪಡೆದುಕೊಂಡಿದ್ದಾನೆ. ಬೈಕ್ ತೆಗೆದುಕೊಳ್ಳಲು ಬಂದಾಗ ಅವರೊಬ್ಬರೇ ಇದ್ದರು. ಪ್ರಸನ್ನ ರವರಿಗೆ ಬೈಕ್ ಚಲಾಯಿಸಲು

ಎಲ್.ಎಲ್. ಆರ್ ಇತ್ತು. ಅದು ಅಪಘಾತದ ದಿನ ಚಾಲ್ತಿಯಲ್ಲಿತ್ತು. ಅಪಘಾತದ ದಿನ ಹಿಂಬದಿ ಸವಾರನಾದ ಶೇಖರ್ ನಿಗೆ ನಾನು ಬೈಕ್ ಅನ್ನು ಕೊಟ್ಟಿಲ್ಲ. ಆದ ಕಾರಣ ನಾವು ಅರ್ಜಿದಾರರಿಗೆ ಪರಿಹಾರ ಕೊಡಲು ಭಾದ್ಯರು ಎಂದರೆ ವಿಮಾ ಸಂಸ್ಥೆಯವರು ಕೊಡಬೇಕು ಎಂದು ಉತ್ತರಿಸಿರುತ್ತಾರೆ. ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಜೆ.ಎಸ್.ಕೆ ವಕೀಲರಿಂದಃ**

ಸಮಯಾವಕಾಶವನ್ನು ಕೋರಿದ್ದು ನೀಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.